# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1070
ಸದಸ್ಯರ ಹೆಸರು : ಡಾ: ಎಂ.ಜಿ.ಮುಳೆ (ವಿಧಾನಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ : 12.03.2026
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಪ್ರಮುಖ ನೀರಾವರಿ ಯೋಜನೆಯಾದ ಕಾರಂಜಾ ಜಲಾಶಯ ನಿರ್ಮಾಣವಾಗಿ ದಶಕಗಳೇ ಕಳೆದರೂ ಇಂದಿಗೂ ಕಾಲುವೆಗಳ ಜಾಲ (Canal network) ಪೂರ್ಣಗೊಳ್ಳದೆ ಸಾವಿರಾರು ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಾರಂಜಾ ನೀರಾವರಿ ಯೋಜನೆಯಡಿ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ 7.691 ಟಿಎಂಸಿ ಸಂಗ್ರಹಣಾ ಸಾಮರ್ಥ್ಯದ ಅಣೆಕಟ್ಟನ್ನು ನಿರ್ಮಿಸಲಾಗಿದ್ದು, ಬಲದಂಡೆ ಕಾಲುವೆ (18,665 ಹೆಕ್ಟೇರ್), ಎಡದಂಡೆ ಕಾಲುವೆ (2,521 ಹೆಕ್ಟೇರ್), ಏತ ನೀರಾವರಿ ಕಾಲುವೆ (2,280 ಹೆಕ್ಟೇರ್), ವಿತರಣಾ ಕಾಲುವೆ – ಡಿ(1)ಎ (1018 ಹೆಕ್ಟೇರ್), ಅತಿವಾಳ ಏತ ನೀರಾವರಿ (ಉತ್ತರ ಕಾಲುವೆ) (2023 ಹೆಕ್ಟೇರ್) ಮತ್ತು ಅತಿವಾಳ ಏತ ನೀರಾವರಿ (ದಕ್ಷಿಣ ಕಾಲುವೆ) (759 ಹೆಕ್ಟೇರ್)ಗಳ ಮೂಲಕ ಒಟ್ಟಾರೆ 27,266 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಕೊನೆಯ ಅಂಚಿನವರೆಗೆ ನೀರು ಹರಿಸಲಾಗುತ್ತಿದೆ. |
| ಆ) | ಕಾರಂಜಾ ಯೋಜನೆಯಿಂದ ಭೂಮಿ ಕಳೆದುಕೊಂಡ 28 ಗ್ರಾಮಗಳ ಸಂತ್ರಸ್ತರು ಕಳೆದ 900 ಕ್ಕೂ ಹೆಚ್ಚು ದಿನಗಳಿಂದ ನಡೆಸುತ್ತಿರುವ ನಿರಂತರ ಹೋರಾಟದ ಹಿನ್ನೆಲೆಯಲ್ಲಿ ಅವರಿಗೆ ನ್ಯಾಯಾಲಯದ ತೀರ್ಪಿನನ್ವಯ ಹೆಚ್ಚುವರಿ ಪರಿಹಾರ (Enhanced Compensation) ನೀಡಲು ಸರ್ಕಾರ ಇವರೆಗೆ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ಕಾರಂಜಾ ಯೋಜನೆಯಡಿ ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆಯಂತೆ ಇತರೆ ಶಾಸನಬದ್ಧ ಸೌಲಭ್ಯಗಳನ್ನು ಸೇರಿಸಿ ಸಂಪೂರ್ಣ ಪರಿಹಾರ ಧನವನ್ನು ಪಾವತಿಸಲಾಗಿದೆ. ಮುಂದುವರೆದು, ಹೆಚ್ಚುವರಿ ಪರಿಹಾರ ಕೋರಿ ಮಾನ್ಯ ನ್ಯಾಯಾಲಯದ ಮೊರೆಹೋದ ಭೂಮಾಲೀಕರಿಗೆ ಹೆಚ್ಚುವರಿ ಪರಿಹಾರವನ್ನು ಸಹ ವಿತರಿಸಲಾಗಿರುತ್ತದೆ.<br><br>ಹೆಚ್ಚುವರಿ ಪರಿಹಾರ ಧನಕ್ಕಾಗಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಕಾಯ್ದೆ 1864 ಕಲಂ 18 (1) ಹಾಗೂ 28 (ಎ) ಅರ್ಜಿಗಳನ್ನು ಸಲ್ಲಿಸದಿರುವ ಭೂಮಾಲೀಕರಿಗೂ ಕೂಡ ಪರಿಹಾರ ಧನ ನೀಡಲು ಹೋರಾಟ ಮಾಡುತ್ತಿದ್ದು, ಭೂಸ್ವಾಧೀನ ಕಾಯ್ದೆ 1864 ರ ಅಡಿಯಲ್ಲಿ ಹೆಚ್ಚುವರಿ ಪರಿಹಾರ ಧನ ನೀಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ.<br><br>ಕಾರಂಜಾ ಯೋಜನೆಯ ಮುಳುಗಡೆ ಸಂತ್ರಸ್ಥರ ಹೋರಾಟ ಸಮಿತಿ, ಬೀದರ್ ಇವರ ಬೇಡಿಕೆಗಳ ಬಗ್ಗೆ ಪರಿಶೀಲಿಸಲು ಪ್ರಾದೇಶಿಕ ಆಯುಕ್ತರು, ಕಲಬುರ್ಗಿ ರವರ ಅಧ್ಯಕ್ಷತೆಯಲ್ಲಿ ರಚಿಸಿರುವ ಅಧಿಕಾರಿಗಳ ಸಮಿತಿಯು ದಿನಾಂಕ:13.11.2025ರಂದು ವರದಿ ನೀಡಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) | ಜಿಲ್ಲೆಯ ಪ್ರಮುಖ ಯೋಜನೆಗಳಾದ ಕೆಳ ಮುಲ್ಲಾಮಾರಿ, ಮಾಂಜ್ರಾ ಮತ್ತು ವಿವಿಧ ಏತ ನೀರಾವರಿ ಯೋಜನೆಗಳು ಅರ್ಧಕ್ಕೆ ನಿಂತಿರುವುದರಿಂದ ಉಂಟಾಗಿರುವ ಆರ್ಥಿಕ ನಷ್ಟ ಎಷ್ಟು; ಈ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಸ್ತುತ ಬಾಕಿ ಇರುವ ಅನುದಾನದ ಮೊತ್ತ ಎಷ್ಟು; | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಕಾರಂಜಾ ಯೋಜನೆ (27,266 ಹೆಕ್ಟೇರ್), ಚುಳಕಿನಾಲಾ ಯೋಜನೆ (4,047 ಹೆಕ್ಟೇರ್), ಮೇಲ್ದಂಡೆ ಮುಲ್ಲಾಮಾರಿ ಯೋಜನೆ (3,279 ಹೆಕ್ಟೇರ್) ಗಳನ್ನು ಅನುಷ್ಠಾನಗೊಳಿಸಿ, ನಿಗದಿತ ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿರುತ್ತದೆ.<br><br>ಇದಲ್ಲದೆ, ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br><br>i. ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ಗಳಿಂದ ನೀರನ್ನು ಒದಗಿಸಿ, ಕ್ರಮವಾಗಿ ಬಲದಂಡೆ ಕಾಲುವೆ ಕಿ.ಮೀ. 60 ಮತ್ತು 90ರಲ್ಲಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ ಯೋಜನೆಯನ್ನು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 2018ರಲ್ಲಿ ರೂ.126.85 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಸದರಿ ಯೋಜನೆಗೆ ಇದೂವರೆಗೆ ರೂ.91.07 ಕೋಟಿ ವೆಚ್ಚವಾಗಿರುತ್ತದೆ.<br>ii. ಬಾಲ್ಕಿ ತಾಲ್ಲೂಕಿನ 10,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ರೂ.762.00 ಕೋಟಿಗಳ ಮೊತ್ತದಲ್ಲಿ ಮೆಹಕರ್ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಾಗಿದ್ದು, ಮೊದಲನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.<br>ಪ್ರಗತಿಯಲ್ಲಿರುವ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| ಈ) | ಗೋದಾವರಿ ಕೊಳ್ಳದ ಹಂಚಿಕೆಯಾದ ನೀರಿನ ಪೂರ್ಣ ಬಳಕೆಗೆ ಅಡ್ಡಿಯಾಗಿರುವ ತಾಂತ್ರಿಕ ಸಮಸ್ಯೆಗಳೇನು: ನೆರೆಯ ರಾಜ್ಯಗಳೊಂದಿಗೆ (ತೆಲಂಗಾಣ / ಮಹಾರಾಷ್ಟ್ರ) ಇರುವ ಜಲ ವಿವಾದಗಳಿಂದ ಬೀದರ ಜಿಲ್ಲೆಯ ಯೋಜನೆಗಳಿಗೆ ಹಿನ್ನಡೆಯಾಗುತ್ತಿದೆಯೇ: | ಗೋದಾವರಿ ಜಲ ವಿವಾದ ನ್ಯಾಯಮಂಡಳಿಯ ತೀರ್ಪಿನನ್ವಯ ಮಾಂಜ್ರಾ ಉಪ ಕಣಿವೆಯಲ್ಲಿ ರಾಜ್ಯಕ್ಕೆ 22.37 ಟಿ.ಎಂಸಿ ನೀರಿನ ಹಂಚಿಕೆಯಾಗಿದೆ. ಸದರಿ ನೀರಿನ ಹಂಚಿಕೆ ಬಳಕೆಗಾಗಿ ಕಾರಂಜಾ ಯೋಜನೆಯಡಿ 9.27 ಟಿಎಂಸಿ ಮತ್ತು ಚುಲ್ಕಿ ನಾಲಾ ಯೋಜನೆಯಡಿ 1.17 ಟಿಎಂಸಿ ನೀರಿನ ಬಳಕೆಗೆ ಅವಕಾಶವಿರುತ್ತದೆ. ಆದರೆ, ಸದರಿ ಎರಡೂ ಯೋಜನೆಗಳ ನದಿಪಾತ್ರದಲ್ಲಿ ನಿರೀಕ್ಷಿತ ಇಳುವರಿ ಇರುವುದಿಲ್ಲ.<br>ಸದರಿ ನೀರಿನ ಕೊರತೆಯನ್ನು ಸರಿದೂಗಿಸಲು ಮಾಂಜ್ರಾ ನದಿಯಿಂದ ಕಾರಂಜಾ ಯೋಜನೆಯ ಕಾಲುವೆಗೆ ನೀರು ಹರಿಸುವ ಯೋಜನೆಯನ್ನು ರೂಪಿಸಲಾಗಿದೆ. ಮಾಂಜ್ರಾ ನದಿಯಿಂದ ಚುಲ್ಕಿ ನಾಲಾ ಯೋಜನೆಗೆ ಹಾಗೂ ಇತರ ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ಹರಿಸಲು ಯೋಜನೆಯನ್ನು ಕೈಗೊಳ್ಳಲಾಗಿದ್ದು, ಮಾಂಜ್ರಾ ನದಿಗೆ ಅಡ್ಡಲಾಗಿ 4 ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿರುತ್ತದೆ. |
| ಉ) | ಈ ಎಲ್ಲಾ ಅಪೂರ್ಣ ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತು ಕಾರಂಜಾ ಸಂತ್ರಸ್ತರಿಗೆ ವೈಜ್ಞಾನಿಕ ಪರಿಹಾರ ನೀಡಲು ಸರ್ಕಾರವು "ವಿಶೇಷ ಆರ್ಥಿಕ ಪ್ಯಾಕೇಜ್" ಘೋಷಿಸಿ ಡಿಸೆಂಬರ್ 2026 ರ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಲಾಗುವುದೇ? | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿ .<br>ಕಾರಂಜಾ ಯೋಜನೆಯ ಮುಳುಗಡೆ ಸಂತ್ರಸ್ಥರ ಹೋರಾಟ ಸಮಿತಿಯ ಬೇಡಿಕೆಗಳ ಕುರಿತು ಅಧಿಕಾರಿಗಳ ಸಮಿತಿಯು ದಿನಾಂಕ:13.11.2025ರಂದು ನೀಡಿರುವ ವರದಿಯ ಕುರಿತು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. |

ಜಸಂಇ 35 ಎಂಎಲ್‌ಎ 2026

(ಡಿ.ಕೆ. ಶಿವಕುಮಾರ್)
ಉಪಮುಖ್ಯಮಂತ್ರಿ